# ಹರ್ಮೋಫ್ರೊಡೈಟಸ್

ಹರ್ಮೋಫ್ರೊಡೈಟಸ್ – ಗ್ರೀಕ್ ದೇವಕತೆಗಳಲ್ಲಿ ಕೇಳಿಬರುವ ಹೆಸರು. ಗ್ರೀಕ್ ಸಂಸ್ಕೃತಿಯ ಆದಿದೈವ ಸ್ಯೂಸ್. ಅವನ ಹೆಂಡತಿಯರು, ಸಂತಾನಗಳ ಮಂಡಲದ ಕತೆಯೇ ವ್ಯಾಪಕವಾದದ್ದು. ಕತೆಗಳಲ್ಲಿ ಬರುವಂತೆ ಸ್ಯೂಸನ ಪ್ರಣಯಲೀಲೆಗಳು ಅಪಾರ. ಹೀಗಾಗಿಯೇ ಅವನ ಸಂತಾನವೂ ಅಪಾರ. ಸೌಂದರ್ಯದೇವತೆ ಅಫ್ರೋಡೈಟಿ ಹಾಗೂ ಹರ್ಮಿಸ್ ದೇವತೆಯ ಸಂಗಮದಿಂದ ಹುಟ್ಟಿದವನು ಹರ್ಮೋಫ್ರೊಡೈಟಸ್.

ಲೈಂಗಿಕ ಅಲ್ಪಸಂಖ್ಯಾತರನ್ನು ಎಲ್‌ಜಿಬಿಟಿ ಎಂದು ಸಾಂಕೇತಿಕವಾಗಿ ಗುರ್ತಿಸಲಾಗಿದೆ. ಲೆಸ್ಬಿಯನ್, ಗೇ, ಬೈಸೆಕ್ಸುಯಲ್ ಹಾಗೂ ಟ್ರಾನ್ಸ್ ಜಂಡರ್ ಎಂಬುದು ಈ ಸಂಕೇತಗಳ ಅರ್ಥ. ಹರ್ಮೋಫ್ರೊಡೈಟ್‌ಗಳನ್ನು ಬೈಸೆಕ್ಸುಯಲ್, ಉಭಯಲಿಂಗಿಗಳೆಂದು ಕರೆಯಲಾಗಿದೆ. ಈ ಪದದ ಉಗಮದ ಹಿಂದಿನ ಹರ್ಮೋಫ್ರೊಡೈಟಸ್ ಕತೆಯನ್ನು ರೋಚಕವಾಗಿಯೇ ಹೇಳಿದರೂ ಅದೊಂದು ಮನಕಲಕುವ ದಾರುಣ ಕತೆಯೇ ಆಗಿದೆ.

ಅಪ್ರತಿಮ ಸುಂದರಿ ಅಫ್ರೋಡೈಟಿ ಹಾಗೂ ಸ್ಯೂಸನ ಮಗನಾದ ಹರ್ಮಿಸ್ ಒಲಂಪಸ್ ಸ್ವರ್ಗಲೋಕದ ಹನ್ನೆರಡು ಮಂದಿ ಪ್ರಧಾನ ದೇವಗಣಕ್ಕೆ ಸೇರಿದವರು. ಹರ್ಮಿಸ್ ಸ್ಯೂಸನ ಮಗನಾಗಿದ್ದು ಅಧಿಕಾರವುಳ್ಳವನಾಗಿದ್ದ ದೇವಲೋಕದ ಸಂದೇಶವಾಹಕ. ಸೌಂದರ್ಯದ ದೇವತೆ ಅಫ್ರೋಡೈಟಳ ಮೇಲೆ ಅವನಿಗೆ ಮೊದಲಿನಿಂದಲೂ ಕಣ್ಣಿತ್ತು. ವಿವಾಹಿತೆಯಾದ ಅವಳು ಅವನ ಕೈಗೆ ಸಿಗದೆ ಉದಾಸೀನದಿಂದ ನೋಡುತ್ತಾಳೆ. ತನ್ನ ಮಗನ ಪೇಚಾಟ ನೋಡಲಾರದ ಸ್ಯೂಸ್ ಅವನಿಗೆ ಸಹಕರಿಸಲೆಂದು ಅವಳ ಚಿನ್ನದ ಚಪ್ಪಲಿಯನ್ನು ಕದ್ದು ಪಕ್ಷಿಯೊಂದರ ಮೂಲಕ ಹರ್ಮಿಸನಿಗೆ ತಲುಪಿಸುತ್ತಾನೆ. ಅದು ಹರ್ಮಿಸನ ಬಳಿ ಇದೆ ಎಂದು ತಿಳಿದ ಅವಳು ಅದನ್ನು ಪಡೆಯಲು ನಾನಾ ಸಂಧಾನವನ್ನು ನಡೆಸುತ್ತಾಳೆ. ಅದೆಲ್ಲವೂ ವಿಫಲವಾದಾಗ ವಿಧಿಯಿಲ್ಲದೆ ತನ್ನನ್ನು ಅವನಿಗೆ ಅರ್ಪಿಸಿಕೊಂಡು ತನ್ನ ಚಪ್ಪಲಿಗಳನ್ನು ಪಡೆದು ಸಂತಸದಿಂದ ತನ್ನ ಅರಮನೆಗೆ ಬರುತ್ತಾಳೆ.

ಅವನೊಂದಿಗಿನ ಪ್ರಣಯದ ಫಲವಾಗಿ ಗರ್ಭಧರಿಸಿ ಗಂಡುಮಗುವೊಂದಕ್ಕೆ ಜನ್ಮನೀಡುತ್ತಾಳೆ. ಇಬ್ಬರೂ ಸೇರಿ ಆ ಮಗುವಿಗೆ ಹರ್ಮೋಫ್ರೊಡೈಟಸ್ ಎಂಬ ಹೆಸರಿಡುತ್ತಾರೆ. ಗುಪ್ತ ಸಂಬಂಧದಿಂದ ಹುಟ್ಟಿದ ಮಗುವನ್ನು ಇಡಾ ಪರ್ವತದ ವನದೇವಿಯರು ಸಾಕಿ ಬೆಳೆಸುತ್ತಾರೆ. ಕಾಡಿನ ನಡುವೆ ಬೇಡನಂತೆ ಬೆಳೆದ ಅವನು ಅತ್ಯಂತ ಸುಂದರನಾಗಿದ್ದ. ಒಂದು ದಿನ ಹದಿನೈದರ ಆ ಬಾಲಕ ಸ್ವಚ್ಛಂದವಾಗಿ ತಿರುಗುತ್ತಾ ಸರೋವರವೊಂದರ ಬಳಿಬಂದ. ಸ್ವಚ್ಛವಾದ ತಿಳಿಜಲಕ್ಕೆ ಮನಸೋತು ಅಲ್ಲೇ ನಿಂತುಬಿಟ್ಟ.

ಆ ಸರೋವರದ ದೇವತೆ ಸಲ್ಮಸಿಸ್ ಈ ಚೆಲುವ ಹುಡುಗನನ್ನು ಕಂಡು ಮರುಳಾಗಿ ಅವನ ಮುಂದೆ ಕಾಣಿಸಿಕೊಳ್ಳುತ್ತಾಳೆ. 'ನೀನು ವಿವಾಹಿತನಲ್ಲದಿದ್ದರೆ ನನ್ನನ್ನು ವರಿಸು. ವಿವಾಹಿತನಾಗಿದ್ದರೆ ನನ್ನನ್ನು ಗುಪ್ತವಾಗಿ ಪ್ರೀತಿಸು. ಹೇಗಾದರೂ ಸರಿಯೇ ನನ್ನನ್ನು ಪ್ರೀತಿಸು' ಎಂದು ಬೇಡಿಕೊಳ್ಳುತ್ತಾಳೆ. ಹುಡುಗ ಸಿಟ್ಟಾದಾಗ, 'ಸಿಟ್ಟಿಗೇಳಬೇಡ. ಈ ಸರೋವರವನ್ನು ನಿನಗೇ ಬಿಟ್ಟುಕೊಡುತ್ತೇನೆ. ಹೇಗಾದರೂ ಬಳಸಿಕೋ' ಎಂದು ಹೇಳಿ ಪಕ್ಕದ ಗಿಡದ ಮರೆಯಲ್ಲಿ ಅಡಗಿ ಕೂರುತ್ತಾಳೆ.

ಮುಗ್ಧ ಹುಡುಗನಿಗೆ ಆ ಸರೋವರ ಅವಳದೇ ಎಂದು ತಿಳಿಯದು. ಈಜಬೇಕೆಂದೆನಿಸಿ ನಗ್ನವಾಗಿ ನೀರಿಗಿಳಿಯುತ್ತಾನೆ. ನೀರಿನಾಟದಲ್ಲಿ ಮೈಮರೆಯುತ್ತಾನೆ. ಇದೆಲ್ಲವನ್ನೂ ಕೂತ ಜಾಗದಿಂದಲೇ ನೋಡುತ್ತಿದ್ದ ಸಲ್ಮಸಿಸ್, ತಾನೂ ನಗ್ನಳಾಗಿ ನೀರಿಗಿಳಿದು ಅವನನ್ನು ಅಪ್ಪಿಕೊಳ್ಳುತ್ತಾಳೆ. ಅವನು ತಪ್ಪಿಸಿಕೊಳ್ಳಲು ಒದ್ದಾಡಿದಷ್ಟೂ ಅವಳ ಅಪ್ಪುಗೆ ಬಿಗಿಯಾಗುತ್ತದೆ. ಗಗನದಲ್ಲಿರುವ ಸಮಸ್ತ ದೇವತೆಗಳಿಗೆ, 'ಓ ದೇವತೆಗಳೇ, ಈ ಹುಡುಗ ನನ್ನಿಂದ ದೂರಾಗದಂತೆ ನಮ್ಮಿಬ್ಬರ ಶರೀರಗಳನ್ನು ಬೆಸೆದುಬಿಡಿ' ಎಂದು ಮೊರೆಯಿಡುತ್ತಾಳೆ. ದೇವತೆಗಳು ಅಸ್ತು ಎನ್ನುತ್ತಾರೆ. ಅವರಿಬ್ಬರ ಶರೀರ ಮುಂದೆಂದೂ ಬೇರ್ಪಡಿಸಲಾರದಂತೆ ಒಂದಾಗುತ್ತದೆ.

ಗ್ರೀಕ್ ದೇವತೆಗಳನ್ನು ಒಳಗೊಂಡಂತೆ ಜಗತ್ತಿನ ಎಲ್ಲ ದೇವತೆಗಳು ಪ್ರಣಯಕೇಳಿಯಲ್ಲಿ ಯುಕ್ತಾಯುಕ್ತತೆಯ ಗಡಿರೇಖೆಗಳನ್ನು ದಾಟಿದವರೇ ಆಗಿದ್ದಾರೆ. ಮುಕ್ತಕಾಮದಲ್ಲಿ ಸಂಚರಿಸುವ ದೇವತೆಗಳಿಗೆ ಸಲ್ಮಸಿಸಳ ಪ್ರಣಯ ಆಶ್ಚರ್ಯವನ್ನು ಉಂಟುಮಾಡುವುದಿಲ್ಲ. ಹಾಗೆ ನೋಡಿದರೆ ಎಲ್ಲಾ ಸಂಸ್ಕೃತಿಗಳ ಕತೆಗಳಲ್ಲೂ ದೇವನಾಗಿರಲೀ, ಮಾನವನಾಗಿರಲೀ ಸಂದರ್ಭ ಒದಗಿಬಂದಾಗ ಹೆಣ್ಣಿನ ಮೇಲೆ ಅತ್ಯಾಚಾರವನ್ನು ಮಾಡುವವನಾಗಿರುತ್ತಾನೆ. ಇಲ್ಲಿನ ವಿಶೇಷವೆಂದರೆ, ಮೊದಲ ಬಾರಿಗೆ ದೇವತೆಯೊಬ್ಬಳು ಪುರುಷದೇವತೆಯ ಮೇಲೆ ಅತ್ಯಾಚಾರ ಮಾಡುವವಳಾಗಿದ್ದಾಳೆ.

ಈ ಘಟನೆಯ ನಂತರ ಹೆಣೆದುಕೊಂಡ ಅವರ ಶರೀರವನ್ನು ಹೆಣ್ಣೆಂದಾಗಲೀ, ಗಂಡೆಂದಾಗಲೀ ಗುರುತಿಸಲಾಗದೆ ಎರಡೂ ಹೌದು ಎನ್ನುವಂತಾಯಿತು. ನಂತರ ಎರಡೂ ಹೌದು ಎನ್ನಬಹುದಾದ ಉಭಯಲಿಂಗಿಗಳಾದರು. ಮುಂದೆ ಸ್ತ್ರೀ, ಪುರುಷ ಲಕ್ಷಣಗಳನ್ನುಳ್ಳ ಹರ್ಮೋಫ್ರೊಡೈಟಗಳೆಂದು ಕರೆಸಿಕೊಂಡರು. ಈ ಅವಸ್ಥೆ ಸಲ್ಮಸಿಸ್ ಬಯಸಿದ್ದಾಗಿತ್ತು. ಆದರೆ ಹರ್ಮೋಫ್ರೊಡೈಟಸ್ ಇದನ್ನು ಬಯಸಿರಲಿಲ್ಲ. ತನ್ನ ಶರೀರಕ್ಕೆ ಉಂಟಾದ ಅವಸ್ಥೆಯ ಬಗೆಗೆ ಜಿಗುಪ್ಸೆಗೊಂಡು, 'ಈ ಸರೋವರದ ನೀರು ಯಾರು ಕುಡಿಯುತ್ತಾರೋ ಅವರ ಪುರುಷತ್ವ ನಾಶವಾಗಲಿ' ಎಂದು ತನ್ನ ತಾಯಿತಂದೆಯರಲ್ಲಿ ಕೇಳಿಕೊಳ್ಳುತ್ತಾನೆ. ಅಂದಿನಿಂದ ಆ ಸರೋವರದಲ್ಲಿ ಯಾರು ಮಿಂದರೂ ಹೆಣ್ಣೂ ಅಲ್ಲದ, ಗಂಡೂ ಅಲ್ಲದ, ಆದರೆ ಎರಡೂ ಹೌದೆಂದಾಗುವ ದೇಹ ಪ್ರಕೃತಿ ಪಡೆಯುವವರಾಗಿದ್ದರು ಎಂಬ ಪ್ರತೀತಿ ಉಳಿದುಹೋಯಿತು.

ಅಂದಿನ ಕಾಲಘಟ್ಟದಲ್ಲೇ ಆದಿಮ ಸಂಸ್ಕೃತಿಯೊಂದು ಉಭಯಲಿಂಗಿಗಳ ಬಗ್ಗೆ ಚಿಂತಿಸಬಲ್ಲದಾಗಿತ್ತು ಎಂಬುದು ಈ ಕಥೆಯ ಮುಖ್ಯ ಸಂಗತಿ. ಭಾರತೀಯ ಪುರಾಣ ಪರಂಪರೆಯಲ್ಲಿಯೂ ಇಂತಹ ಕಥೆಗಳಿವೆ; ಸ್ತ್ರೀ ಪುರುಷ ಸಮಾನತೆಯ ಅರ್ಧನಾರೀಶ್ವರನ ಕಲ್ಪನೆಯಂತಹ ಕತೆಗಳು ನಮ್ಮಲ್ಲಿವೆ. ಸತ್ಯಂ, ಶಿವಂ, ಸುಂದರಂ ಎನ್ನುವ ಕಲ್ಪನೆಯ ಶಿವ ನಿತ್ಯಸತ್ಯನೂ, ಸುಂದರನೂ, ಸೃಷ್ಟಿಕರ್ತನೂ, ಲಯಕರ್ತನೂ ಹೌದು. ಅವನೆಷ್ಟು ಪತ್ನಿಪ್ರಿಯನೆಂದರೆ ತನ್ನ ದೇಹದಲ್ಲೇ ಪಾರ್ವತಿಯ ಅರ್ಧಾಂಗವನ್ನು ಅಡಗಿಸಿಕೊಂಡು 'ಅರ್ಧನಾರೀಶ್ವರ'ನಾದ

ಶಿವಪುರಾಣದ ಉಲ್ಲೇಖವೊಂದರಲ್ಲಿ ಬರುವಂತೆ ಭೃಂಗಿ ಎಂಬ ಗಣನಾಯಕ ಕೈಲಾಸದಲ್ಲಿ ಪಾರ್ವತಿಯನ್ನು ಅಸಡ್ಡೆಯಿಂದ ಕಾಣುತ್ತಾನೆ. ಸಿಟ್ಟಿಗೆದ್ದ ಪಾರ್ವತಿ ಭೃಂಗಿಯ ತೇಜಸ್ಸನ್ನು ಕುಗ್ಗಿಸಲಾರಂಭಿಸುತ್ತಾಳೆ. ಶಿವ ಅವನ ತಪಶ್ಶಕ್ತಿ ಕುಗ್ಗದಂತೆ ತನ್ನ ದಂಡವನ್ನು ಅಡ್ಡ ಹಿಡಿಯುತ್ತಾನೆ. ಇದರಿಂದ ಸಿಟ್ಟಿಗೆದ್ದ ಪಾರ್ವತಿ ಕೇದಾರದಲ್ಲಿ ತಪಸ್ಸುಮಾಡಿ ಶಿವನ ಅರ್ಧಾಂಗವನ್ನು ವಶಪಡಿಸಿಕೊಂಡಳು ಎನ್ನುವ ಕತೆಗಳು ಲಭ್ಯವಾಗುತ್ತವೆ. ಇಂದೂ ಸಹ ಎಂದೋ ಇದ್ದವು ಎನ್ನಲಾಗುವ ವೇದಪುರಾಣಗಳ ಸುತ್ತಲೇ ನಮ್ಮ ಬದುಕನ್ನು ಕಟ್ಟಬಯಸುವವರು ನಿಜದ ಮೂಲ ಪುರಾಣಗಳಿಂದ ತಿಳಿಯಬೇಕಾದ್ದು ಸಾಕಷ್ಟಿದೆ.

■ **ಅಮೃತಮತಿ**

## ಮಾತೇ ಮುತ್ತು

- ಮುಚ್ಚು ಮರೆ ಇಲ್ಲದೆಯೇ ನಿನ್ನ ಮುಂದೆಲ್ಲವನು ಬಿಚ್ಚಿಡುವೆ ಓ ಗುರುವೇ ಅಂತರಾತ್ಮ
  ಪಾಪವಿದೆ ಪುಣ್ಯವಿದೆ, ನರಕವಿದೆ ನಾಕವಿದೆ, ಸ್ವೀಕರಿಸು ಓ ಗುರುವೇ ಅಂತರಾತ್ಮ
  —ಕುವೆಂಪು
- ಬದುಕು ಮತ್ತು ಬಾಳು ಬೇರೆ ಬೇರೆ – ಬದುಕು ವೃದ್ಧಿ, ಬಾಳು ಸಿದ್ಧಿ.
  —ದ.ರಾ. ಬೇಂದ್ರೆ
- ಇತಿಹಾಸವೆಂದರೆ ಸತ್ತವರ ಮೇಲೆ ಕಟ್ಟುವ ಗೋರಿಯಲ್ಲ. ಅದು ಆಳವಾದ ತತ್ವಜ್ಞಾನ.
  —ಆಲೂರು ವೆಂಕಟರಾಯ
- ಕರ್ತವ್ಯವನ್ನು ಕುರಿತು ಮೊದಲು ಯೋಚನೆ ಮಾಡಿ; ಹಕ್ಕುಗಳು ಆಮೇಲೆ ಬರಲಿ.
  —ಡಿ.ವಿ. ಗುಂಡಪ್ಪ
- ಮಕ್ಕಳನ್ನು ಕುಬ್ಜ ವೃದ್ಧರೆಂದು ತಿಳಿಯದ, ಅವರ ಸಹಜ ವಿಕಾಸಕ್ಕೆ ಹಾತೊರೆಯುವ ಶಿಕ್ಷಣ ಮತ್ತು ಶಿಕ್ಷಕರು ಬೇಕು.
  —ಶಿವರಾಮ ಕಾರಂತ